ವಿಷಯ ಒಗಟಿನಂಥದ್ದು ಅನ್ನಿಸಿತು. ಪೂರ್ತಿ ಅರ್ಥವಾಗಲಿಕ್ಕೆ – ಇಬ್ಬರ ನಡುವೆ ಒಂದಿಷ್ಟು ಸುಮಾರು ಮಾತೂ, ಹೊತ್ತೂ ವ್ಯಯಗೊಂಡವು!

'ವೆಲ್ಲ್... ನಾನು ಆತನ್ನ ಭೇಟಿ ಮಾಡಿದ್ದು – ಇಲ್ಲೇ ನಮ್ಮ ಮನೆ ಎದುರಿಗೆ ಒಂದು ಪಾರ್ಕ್ ಇದೆ. ಅಲ್ಲಿ...'

'ಶರ್ಲೀ... ಶರ್ಲೀ... ಕೆನ್ನೈ ಇಂಟರಪ್ಟ್? ನೀನು ಎಲ್ಲಿದ್ದೀ ಅಂತ ಸಹ ನನಗೆ ಗೊತ್ತಿಲ್ಲ... ಪೂರ್ತಿ ಸಂದರ್ಭ ಏನೂಂತ ಹೇಳಲಿಕ್ಕಾಗುತ್ತಾ?'

'ಯೆಸ್ಸ್ ಯೆಸ್ಸ್... ನಾನೂ, ವಿರಾಟೂ ಬಾಣಸವಾಡಿಯಲ್ಲೊಂದು ಫ್ಲ್ಯಾಟಿನಲ್ಲಿ ಇರುತೀವಿ... ನಮ್ಮ ಬಿಲ್ಡಿಂಗ್ ಎದುರಿಗೆ ಒಂದು ಪಾರ್ಕ್ ಇದೆ. ಅಲ್ಲಿ ನಾವಿಬ್ಬರೂ ಬೆಳಿಗ್ಗೆ ಸಂಜೆ ವಾಕ್ ಮಾಡೋದಿದೆ...'

'ಓಕೆ...' ಸನ್ನಿವೇಶವನ್ನು ನಿಧಾನವಾಗಿ ಅರ್ಥ ಮಾಡಿಕೊಳ್ಳುತ್ತ ಹೇಳಿದೆ.

'ಈ ಪಾರ್ಕಿನ ಆಚೆ ಬದಿಯಲ್ಲಿ ಇನ್ನೊಂದು ಅಪಾರ್ಟ್‌ಮೆಂಟ್ ಇದೆ... ಇಲ್ಲಿ ಈ ಕೇಟ್ ಇರುತಾ ಇದ್ದರು. ಕೇಟ್ ಅನ್ನೋದು ನಾವು ಆತನಿಗೆ ಇಟ್ಟಿದ್ದ ಹೆಸರು. ನಾವು ಅಂದರೆ ನಾವೆಲ್ಲ ಪಾರ್ಕಿನಲ್ಲಿ ವಾಕಿಂಗ್ ಮಾಡುತೀವಲ್ಲ, ಒಂದು ಹತ್ತು ಜನ ಫ್ರೆಂಡ್ಸು– ನಾವೆಲ್ಲ ಆತನನ್ನ ಕೇಟ್ ಅಂತಲೇ ಕರೀತಿದ್ದಿದ್ದು... ಅವರ ಅಸಲಿ ಹೆಸರು ಸಾಕೇತರಾಮ ಅಂತ. ನಾವೆಲ್ಲ ಕೇಟ್ ಅನ್ನುತ್ತಿದ್ದಿವಿ... ಈಗ ಅರ್ಥ ಆಯಿತಾ?'

'ಓಹ್... ಈ ಕೇಟ್ ಅನ್ನೋ ಮನುಷ್ಯನಾ ನಿನ್ನೆ ಸತ್ತು ಹೋಗಿದ್ದು?' ತೀರಾ ನಿರ್ಭಾವುಕನಾಗಿ ಕೇಳಿದೆ. ಕೇಳಿಯಾದ ಮೇಲೆ, ಕೇಳಿದ ಬಗೆ ಸರಿಯಿದ್ದಿಲ್ಲವೇನೋ– ಎಂದು ಪೇಚಾಡಿಕೊಂಡೆ.

'ಯೆಸ್ಸ್ ಯೆಸ್ಸ್... ಯು ಆರ್ ರೈಟ್. ನಿನ್ನೆ ಬೆಳಿಗ್ಗೆ ಅನ್ನೋದಕ್ಕಿಂತ, ಮೊನ್ನೆ ರಾತ್ರಿ ತೀರಿಕೊಂಡಿರಬಹುದು ಅಂತ ಡಾಕ್ಟರು ಹೇಳಿದರು... ನಿದ್ರೆಯಲ್ಲೇ ಹೋಗಿಬಿಟ್ಟಿದ್ದಾರೆ. ಮ್ಯಾಸ್ಸಿವ್ ಹಾರ್ಟ್ ಅಟ್ಯಾಕ್! ಆದರೆ ಮುಖದಲ್ಲಿ ನಿಸ್ಸೀಮವಾದ ಶಾಂತಿ ಇತ್ತು... ಹಿ ಲುಕ್ಡ್ ವೆರಿ ವೆರಿ ಪೀಸ್‌ಫುಲ್!'

'ಸರಿ...'

'ಕೇಟ್ – ನನಗೆ ಮತ್ತು ವಿರಾಟ್‌ಗೆ ಬಲು ಹತ್ತಿರದ ಫ್ರೆಂಡ್ ಆಗಿದ್ದರು. ದಿನವೂ ಬೆಳಿಗ್ಗೆ ಪಾರ್ಕಿನಲ್ಲಿ ಸಿಗೋರು... ಸಂಜೆಯ ಮೇಲೆ, ಆಲ್ಮೋಸ್ಟ್ ಅಂದರೆ ಆಲ್ಮೋಸ್ಟ್ ಪ್ರತಿ ದಿನ – ವಿ ವುಡ್ ಡೆಫಿನಿಟ್‌ಲೀ ಮೀಟ್ ಓವರ್ ಎ ಡ್ರಿಂಕ್... ಇದು ಸುಮಾರು ನಾಕು ನಾಕೂವರೆ ವರ್ಷಗಳಿಂದ ನಡೀತಾ ಇದೆ... ಐ ಮೀನ್ ನಡೀತಾ ಇತ್ತು...'

'....'

